

# ಮುಂಡಗೋಡ ಕೆರೆಯಲ್ಲಿ ಹಕ್ಕಿಗಳ ಕಲರವ



★ ಚಿತ್ರ- ಬರಹ: ಎಂ.ಆರ್.ಮಂಜುನಾಥ್

ಹುಬ್ಬಳ್ಳಿಯಿಂದ 50 ಕಿ.ಮೀ. ದೂರದಲ್ಲಿರುವ ಮುಂಡಗೋಡು ಅಮ್ಮಾಜಿ ಕೆರೆಯಲ್ಲಿ ಈಗ ಹಕ್ಕಿಗಳ ಕಲರವ. ಸಮೃದ್ಧವಾಗಿ ಬೆಳೆದು ನಿಂತ ತಾವರೆ ಹೂವು, ಎಲೆಗಳು ಕೆರೆ ತುಂಬ ಹರಡಿಕೊಂಡಿವೆ. ನೀರನ್ನೇ ನಂಬಿ ಬದುಕುವ ಜಲಪಕ್ಷಿಗಳಿಗೆ ಸಂಭ್ರಮ. ಗುಳುಮುಳುಕ, ನೀರು ಕಾಗೆ, ಕತ್ತಲ ಗುಪ್ಪಿ, ಕೊಳದ ಬಕ, ಗೋವಕ್ಕಿ, ಚಲುಕ ಬಾತು, ಸಿಳ್ಳೆ ಬಾತು, ವರಟೆ, ಜಂಬುಕೋಳಿ, ನಾಮದ ಕೋಳಿ, ನೀಲಿ ನಾಮಗೋಳಿ, ಅರಿಶಿಣ ಕತ್ತು ಜಸಾನಾ, ದೇವನಕ್ಕಿ– ಹೀಗೆ ಹತ್ತು ಹಲವು ಪಕ್ಷಿಗಳ ಜೀವ ಸಂಕುಲ ಈ ಕೆರೆಯ ಸುತ್ತ ಬೀಡುಬಿಟ್ಟಿದೆ.

ಮಳೆ, ಗಾಳಿ, ಬಿಸಿಲಿಗೆ ಸವಾಲೊಡ್ಡಿ ದೂರದ ಊರಿನಿಂದ ಇಲ್ಲಿಗೆ ಬಂದವು ಎಷ್ಟೋ, ಇಲ್ಲೇ ಹುಟ್ಟಿ ಬೆಳೆದವು ಎಷ್ಟೋ ಎನ್ನುವ ಲೆಕ್ಕವಂತೂ ಸದ್ಯಕ್ಕೆ ಗೊತ್ತಿಲ್ಲ.

ಅದೋ ಅಲ್ಲಿ ನೋಡಿ: ತುಂತುರು ಮಳೆ ಹನಿಗಳ ನಡುವೆ ಮರಿ ಸಿಕ್ಕಿ ಒದ್ದಾಡುತ್ತಿರುವುದನ್ನು ಕಂಡ ತಾಯಿ (ನೀಲಿ ನಾಮ ಗೋಳಿ ಪಕ್ಷಿ) ತನ್ನ ರೆಕ್ಕೆಗಳನ್ನು ಕೊಡೆಯಂತೆ ಹರಡಿ ಮರಿಗೆ ರಕ್ಷಣೆ ನೀಡುತ್ತಿದೆ. ಇದು ಕೋಳಿ ಗಾತ್ರದ ನೇರಳೆ ಮಿಶ್ರಿತ ನೀಲಿ ಜಲಪಕ್ಷಿ. ಹಣೆಯ ಮೇಲೆ ಚಿಕ್ಕ ಕೆಂಪು ಟೋಪಿ. ನೀಳ ಕಾಲುಗಳು. ಕೆಂಪು, ನೀಲಿ ಮೋಟು ಬಾಲದ ತಳಭಾಗದಲ್ಲಿ ಬಿಳಿ ಬಣ್ಣ ಕಾಣಬಹುದು. ಸದಾಕಾಲ ಆಹಾರವನ್ನು ಅರಸುತ್ತ ಕೊಳದಲ್ಲಿ ಅತ್ತಿಂದಿತ್ತ ಸದ್ದು ಮಾಡುತ್ತ ಚಲಿಸುವಾಗ ಮೋಟು ಬಾಲವನ್ನು ಮೇಲಕ್ಕೆತ್ತುತ್ತಿರುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಜೊಂಡು ಹುಲ್ಲಿನಿಂದ ಕೂಡಿದ ತೇಲುವ ಗೂಡನ್ನು ಜೂನ್–ಸೆಪ್ಟೆಂಬರ್ ತಿಂಗಳಲ್ಲಿ ಕಟ್ಟಿ ಕಂದು ಮಿಶ್ರಿತ ಕೆಂಪು ಚುಕ್ಕೆಗಳಿರುವ ತಿಳಿ ಹಳದಿಯ 3ರಿಂದ 7 ಮೊಟ್ಟೆಗಳಿಗೆ ಸುಮಾರು 20 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತದೆ.

ದೇವನಕ್ಕಿ ಪಕ್ಷಿಯು (ಬ್ರಾನ್ಸ ವಿಂಗ್ ಜಸಾನಾ) ತನ್ನ ಮರಿಗಳಿಗೆ ಬೆಳಗಿನ ವಾಯು ವಿಹಾರ, ಆಹಾರದ ಬೇಟೆ ಕಲಿಸಿಕೊಡುತ್ತಿದೆ. ನಾಮದ ಕೋಳಿ ಮರಿಗಳಿಗೆ, 'ಶತ್ರುಗಳು ಬರುತ್ತಿದ್ದಾರೆ ಬಚ್ಚಿಟ್ಟುಕೊಳ್ಳಿ' ಎಂದು ಎಚ್ಚರಿಕೆ ಕೊಡುತ್ತಿದೆ. ಇದು ಕೋಳಿ ಗಾತ್ರದ ಮಿರುಗುವ ಕಪ್ಪು ಮಿಶ್ರಿತ ಹಸಿರು ಪಕ್ಷಿ. ತಲೆಯ ಹಿಂಬದಿವರೆಗಿನ ನೀಳವಾದ ಬಿಳಿ ಹುಬ್ಬು, ಹಣೆಯ ಮೇಲೆ ಕೆಂಪು ತಿಲಕ. ಕೊಕ್ಕು ಹಳದಿ, ಕಾಲುಗಳು ಬೂದು. ರೆಕ್ಕೆ, ಬೆನ್ನು ಹಾಗೂ ಮೋಟು ಬಾಲ ಕಂಚಿನ ಬಣ್ಣದಾಗಿರುತ್ತದೆ. ಬಾಲದ ತಳಭಾಗದಲ್ಲಿ ಕೆಂಪು ಬಣ್ಣ ಕಂಡುಬರುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಜಲಸಸ್ಯಗಳಿಂದ ಕೂಡಿದ ತೇಲುವ ವೃತ್ತಾಕಾರದ ಗೂಡನ್ನು ನಿರ್ಮಿಸುತ್ತದೆ. ಜೂನ್– ಸೆಪ್ಟೆಂಬರ್ ತಿಂಗಳೊಳಗೆ 4 ಕಂಚುವರ್ಣದ ಮೊಟ್ಟೆಗಳಿಗೆ ಸುಮಾರು 14ರಿಂದ 16 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತದೆ.

ನಾಮದ ಕೋಳಿ( ಕಾಮನ್ ಕೂಟ್): ಇದು ಬಾತುಕೋಳಿ ಗಾತ್ರದ ಕಪ್ಪುಹಕ್ಕಿ. ಇದರ ಹಣೆಯ ಮೇಲೆ ಬಿಳಿ ನಾಮ ದೂರಕ್ಕೂ ಗೋಚರಿಸುತ್ತದೆ. ಕರ್ಕಶ ಕೂಗು ಇದರ ವಿಶೇಷ. ಜಲ ಸಸ್ಯ, ಎಲೆ, ಕಡ್ಡಿಗಳಿಂದ ಕೂಡಿದ ತೇಲುವ ಗೂಡನ್ನು ಜುಲೈ– ಆಗಸ್ಟ್‌ನಲ್ಲಿ ಕಟ್ಟುತ್ತದೆ. ಕಂದು ಮಿಶ್ರಿತ ಕೆಂಪು ಚುಕ್ಕೆಗಳಿರುವ 6ರಿಂದ 10 ತಿಳಿಕಂದು ಮೊಟ್ಟೆಗಳಿಗೆ ಸುಮಾರು 21 ರಿಂದ 24 ದಿನದವರೆಗೆ ಕಾವು ಕೊಟ್ಟು ಮರಿ ಮಾಡುತ್ತದೆ. ಇದರ ಆಯಸ್ಸು 18 ವರ್ಷ.

17 ಎಕರೆ ವಿಸ್ತೀರ್ಣದ ಕೆರೆ ಇದೆ. ಇತ್ತೀಚೆಗೆ ಕೆರೆಗೆ ಕಲ್ಮಶ ನೀರು ಬಂದು ಸೇರುತ್ತಿದೆ ಎನ್ನುವುದು ಪರಿಸರಪ್ರಿಯರ ಆತಂಕ.